**DW-1:** ಗೌರಮ್ಮ

ದಿನಾಂಕಃ **10.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ನನ್ನ ಗಂಡನ ಹೆಸರು ಲಕ್ಷ್ಮಪ್ಪ. ಅವರು ಪ್ರಸ್ತುತ ಜೀವಂತ ಇರುವುದಿಲ್ಲ. ಸುಮಾರು 7-8 ವರ್ಷಗಳ ಹಿಂದೆ ಅವರು ಮೃತಪಟ್ಟಿರುತ್ತಾರೆ. ಲಕ್ಷ್ಮಪ್ಪ ರವರಿಗೆ ಗೌರಮ್ಮ ಆದ ನಾನು ಮತ್ತು ನನ್ನ ಸಹೋದರಿ ಗಂಗಮ್ಮ 2 ನೇ ಹೆಂಡತಿ. ನನ್ನ ತವರು ಮನೆ ಮಹಾಂತಪುರ. ನನ್ನ ವಿವಾಹವಾದ ದಿನಾಂಕ ಗೊತ್ತಿಲ್ಲ. ಗಂಗಮ್ಮನ ವಿವಾಹವಾದ ದಿನಾಂಕವೂ ಗೊತ್ತಿಲ್ಲ. ಆದರೆ ಒಂದೇ ದಿನ ನಮ್ಮಿಬ್ಬರನ್ನು ವಿವಾಹವಾಗಿರುತ್ತಾರೆ. ನನಗೆ ನಾಗಮ್ಮ ಎಂಬ ಒಬ್ಬಳೇ ಮಗಳು. ನನ್ನ ಮಗಳ ಗಂಡನ ಹೆಸರು ಮಹಾಲಿಂಗ. ಸುಮಾರು 5-6 ವರ್ಷಗಳ ಹಿಂದೆ ನನ್ನ ಮಗಳು ಮೃತಪಟ್ಟಿರುತ್ತಾಳೆ. 1 ನೇ ವಾದಿ ಡಿ. ಮಹಾಲಿಂಗ ನನ್ನ ಮಗಳ ಗಂಡ ಎಂದರೆ ಸರಿ. ವಾದಿ 2 ಮತ್ತು 3 ರವರು ನನ್ನ ಮಗಳ ಮಕ್ಕಳು ಎಂದರೆ ಸರಿ. 2 ನೇ ಪ್ರತಿವಾದಿ ಗಂಗಮ್ಮ ರವರ ಮಗ 3 ನೇ ಪ್ರತಿವಾದಿ ಹನುಮಂತರಾಯ ಎಂದರೆ ಸರಿ. ನನ್ನ ಮತ್ತು ಗಂಗಮ್ಮ ರವರ ವಿವಾಹ ಲಕ್ಷ್ಮಪ್ಪ ರವರೊಂದಿಗೆ ಒಂದೇ ದಿನ ನೇರವೇರಿಲ್ಲ ಎಂದರೆ ಸರಿಯಲ್ಲ. ನನ್ನ ಒಪ್ಪಿಗೆ ಇಲ್ಲದೇ ಗಂಗಮ್ಮ ರವರನ್ನು ವಿವಾಹ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

2. ನನ್ನನ್ನು 3 ನೇ ಪ್ರತಿವಾದಿ ಹನುಮಂತರಾಯ ಕರೆದಕೊಂಡು ಬಂದಿರುತ್ತಾರೆ. ದಾವಾ ಸ್ವತ್ತುಗಳು ನನ್ನ ಗಂಡನಿಗೆ ಸೇರಿದ್ದವು ಎಂದರೆ ಸರಿ. 3-4 ವರ್ಷಗಳ ಹಿಂದೆ ದಾವಾ ಸ್ವತ್ತುಗಳನ್ನು ನನ್ನ ತಂಗಿಗೆ ಮಾಡಿಸಿರುತ್ತೇನೆ. ನಾಗಮಣಿ ದಾಖಲೆಗೆ ಸಹಿ ಮಾಡಿಲ್ಲ ಆಕೆ ಸತ್ತ ನಂತರ ದಾಖಲೆ ಮಾಡಲಾಗಿದೆ. ಮಹಾಲಿಂಗ ರವರಿಗೆ ವಾದಿ 2 ಮತ್ತು 3 ರವರು ವಾರಸುದಾರರು ಎಂದರೆ ಸರಿ. ಗಂಗಮ್ಮ ರವರಿಗೆ ದಾಖಲೆ ಮಾಡಿಕೊಟ್ಟಾಗ ವಾದಿಗಳ

ಸಹಿಗಳನ್ನು ಪಡೆದಿರುವುದಿಲ್ಲ. ವಾದಿಗಳು ಮತ್ತು ನಮ್ಮ ನಡುವೆ ವಿಭಾಗವಾಗಿಲ್ಲ ಆದರೆ ನಮಗೆ ಆಗಿರುತ್ತದೆ. ವಾದಿಯರಿಗೂ ಸಹ ದಾವಾ ಸ್ವತ್ತುಗಳಲ್ಲಿ ಭಾಗ ಇದೆ ಎಂದರೆ ನಾನು ಸಾಯುವವರೆಗೂ ಕೊಡುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆ ಸಲ್ಲಿಸುವ ಸಂದರ್ಭ ವಾದಿಗಳು ಸ್ವತ್ತುಗಳಲ್ಲಿ ಭಾಗ ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಭಾಗ ನೀಡಲು ವಿನಃ ಕಾರಣ ಸಮಯ ದೂಡುತ್ತಿದ್ದೆ ಆ ನಂತರ ಅವರು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

3. ವಿಭಾಗವಾಗಿರುವ ಬಗ್ಗೆ ವಾದಿಗಳು ಎಂ.ಆರ್.ಹೆಚ್.11/2018-19 ಮತ್ತು ಎಂ.ಆರ್.ಹೆಚ್.13/2019-20 ರ ದಾಖಲೆಗಳನ್ನು ಪಡೆದಾಗ ಅವರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಎಂ.ಆರ್.ಹೆಚ್.11/2018-19 ಮತ್ತು ಎಂ.ಆರ್.ಹೆಚ್.13/2019-20 ರ ದಾಖಲೆಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ನಡುವೆ ವಿವಾಹ ವಿಚ್ಛೇದನ ಆಗಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಮಗಳನ್ನು ಬಿಟ್ಟು ವಿಭಾಗ ಮಾಡಿಕೊಳ್ಳಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 12.02.2020 ರ ವಿಭಾಗ ಪತ್ರಕ್ಕೆ ನನ್ನ ಮಗಳು ನಾಗಮಣಿ ಮತ್ತು ಆಕೆಯ ಗಂಡ ಮಕ್ಕಳು ಸಹಿ ಮಾಡಿಲ್ಲ. ವಿಭಾಗ ಮಾಡಿಕೊಳ್ಳುವ ಸಲುವಾಗಿ ನಾನು ಅವರನ್ನು ಕರೆದಿಲ್ಲ. ವಿಭಾಗ ಪತ್ರ ಮತ್ತು ಮುಟೇಷನ್ ವಹಿಗಳು ವಾದಿಯರಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.